ಹೀರೊ ಹೀರೊ ಹೀರೊ! ಇದು ಕನ್ನಡ ಚಿತ್ರರಂಗದ ಸದ್ಯದ ಮಂತ್ರ. ಇತ್ತೀಚಿನ ಕೆಲವು ವರ್ಷಗಳ ಅಂಕಿಅಂಶಗಳನ್ನು ಗಮನಿಸಿದರೆ, ಯಶಸ್ಸು ಕಂಡ ಬಹುತೇಕ ಕನ್ನಡ ಸಿನಿಮಾಗಳು ನಾಯಕಪ್ರಧಾನವಾದವು. ನಾಯಕಿಪ್ರಧಾನ ಸಿನಿಮಾಗಳು ಗೆಲುವು ಕಾಣುವುದಿರಲಿ, ರೂಪುಗೊಳ್ಳುವುದೇ ಕಷ್ಟ ಎನ್ನುವ ಪರಿಸ್ಥಿತಿ ಕನ್ನಡ ಚಿತ್ರರಂಗದಲ್ಲಿದೆ. ಸ್ತ್ರೀಪ್ರಧಾನ ಕಥನಗಳನ್ನು ಕಲಾತ್ಮಕ ಸಿನಿಮಾಗಳಿಗೆ ಬಿಟ್ಟುಕೊಟ್ಟಿರುವ ವ್ಯಾಪಾರಿ ಚಿತ್ರರಂಗ, ನಾಯಕರ ಮೆರವಣಿಗೆಗೆ ಮರುಳಾಗಿದೆ. ನಾಯಕನ ಮನರಂಜನೆಗೆ ಒದಗಿಬರುವ ಸವಲತ್ತಿನ ರೂಪದಲ್ಲಿ ನಾಯಕಿ ಪಾತ್ರಗಳು ರೂಪುಗೊಳ್ಳುತ್ತಿವೆ. ಪುರುಷ ಪ್ರಧಾನ ಚಿತ್ರರಂಗದಲ್ಲಿ ಹೆಣ್ಣು ಕೇವಲ ‘ಐಟಂ’ ರೂಪದಲ್ಲಷ್ಟೇ ಬಳಕೆಯಾಗುತ್ತಿದ್ದಾಳೆಯೆ? ಲಿಂಗಸೂಕ್ಷ್ಮತೆ ಕನ್ನಡ ಚಿತ್ರರಂಗಕ್ಕೆ ಎಟುಕದ ಸೂಕ್ಷ್ಮವೆ? ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುವವರು ಚಿತ್ರರಂಗದಲ್ಲಿ ಅಪರೂಪ ಆಗುತ್ತಿದ್ದಾರೆ. ‘ಮಹಿಳಾದಿನ’ದ ಮಾಸದಲ್ಲಿ, ಕನ್ನಡ ಚಿತ್ರರಂಗದಲ್ಲಿ ಕಥಾನಾಯಕಿಯರ ಸ್ಥಿತಿಗತಿಯ ಅವಲೋಕನ ಈ ವಾರದ ‘ಸುಧಾ’ ವಿಶೇಷ.



‘ಯಾನ’ದ ಚೆಲುವೆಯರು:
ವೈಭವಿ, ವೈಸಿರಿ, ವೈನಿಧಿ

■ ಸುಮಲತಾ ಎನ್.

# ಮಹಿಳಾ ಪ್ರಧಾನ! ಎಲ್ಲಿದೆ ಸಮಾಧಾನ?